# IISc India's best univ, IIM-B no. 2 B-school

Manash.Gohain
@timesgroup.com

**New Delhi:** IIT-Madras retained its top position in the overall category among educational institutions in India with IISc, Bangalore, and IIT-Delhi bagging the second and third spots respectively in the National Institutional Ranking Framework 2020 announced by the HRD ministry on Thursday.

The top three universities in the annual rankings are IISc, Bangalore, Jawaharlal Nehru University and Banaras Hindu University. Delhi University's Miranda House continues to top the list in the overall category of colleges for the fourth consecutive year ever since the category was introduced in 2017. IIM-Ahmedabad has been ranked as the top B-School in the country, followed by IIM-Bangalore and Calcutta.

## K'TAKA'S BEST

- **IISc, Bangalore,** emerges top university in India and 2nd in overall category
- Bengaluru's **National Law School of India University** tops in law category
- **IIM-Bangalore** the second best B-school in the country
- In dental section, **Manipal College of Dental Sciences** in Manipal bags 2nd rank

▶ 7 IITs among top 10, P 14

THE TIMES OF INDIA



# 7 IITs ranked among top ten institutions

## 12 Delhi University Colleges Feature In NIRF List

▶Continued from page 1

In all, 12 DU colleges feature in top 20 with Lady Shri Ram (LSR) College occupying the second slot. Seven IITs are among the top 10 higher education institutions in the country. In the medical category, All India Institute of Medical Sciences, Delhi remains on top, followed by Post Graduate Institute of Medical Education and Research, Chandigarh.

In the overall category, the top six institutions retained their positions while IIT-Guwahati moved up by two positions to be ranked 7th this year. The new entry into the top 20 is IIT-Hyderabad. It is for the 5th consecutive time that IIT-Madras maintained its top position in the engineering category ever since the rankings were introduced. The fifth edition of NIRF saw 20% increase in participation. The institutions are ranked on the basis of five parameters – teaching, learning and resources; research and professional practice; graduation outcomes; outreach and inclusivity; and peer perception.

Minister of state for HRD Sanjay Dhotre, said: "These rankings will help students and parents choose an institution in an informed manner. This will also help the industry in identifying talent. Higher education institutions should help students who suffer from some learning deficits since their school days, and address such deficits in a fundamental manner for all-round development."

In the pharmacy category, Delhi's Jamia Hamdard is on top, followed by Panjab University. In law, National Law School of India University, Bangalore topped, followed by National Law University, Delhi.

In the dental category, Maulana Azad Institute of Dental Sciences, Delhi has been ranked at No 1, followed by Manipal College of Dental Sciences, Manipal.

IIT-Madras Director Professor Bhaskar Ramamurthi said: "We are delighted to maintain our top position. This is the result of excellent work of our faculty, students and staff, and we look forward to continue on the path of excellence and make a mark internationally." Colleges and engineering categories are among the most closely followed lists. Ahead of admissions for the 2020-21 academic session, Delhi continued its dominance. Besides university category in which the city features thrice, Delhi institutions also topped in medical, dental and pharmacy categories.

TOI



IIT-Madras maintained top position in engineering category for the 5th time

ಕೇಂದ್ರದಿಂದ ಐದನೇ ವರ್ಷದ ರ್‍ಯಾಂಕಿಂಗ್ ಪ್ರಕಟ | ಕರ್ನಾಟಕದ ಸಂಸ್ಥೆಗಳ ಮೇಲುಗೈ

# ಉನ್ನತ ಶಿಕ್ಷಣದಲ್ಲಿ ಬೆಂಗಳೂರು ಬೆಸ್ಟ್

**ಹೊಸದಿಲ್ಲಿ:** ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ 'ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ರ್‍ಯಾಂಕಿಂಗ್ ವ್ಯವಸ್ಥೆ'ಯು (ಎನ್ಐಆರ್‌ಎಫ್) ಗುರುವಾರ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸಿದ್ದು ಇದರಲ್ಲಿ ಬೆಂಗಳೂರಿನ ಶಿಕ್ಷಣ ಸಂಸ್ಥೆಗಳು ಉತ್ತಮ ಸಾಧನೆ ಮಾಡಿವೆ.

ಸಮಗ್ರ ರ್‍ಯಾಂಕಿಂಗ್‌ನಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ (ಐಐಎಸ್ಸಿ) ಎರಡನೇ ಸ್ಥಾನ ಲಭಿಸಿದ್ದರೆ, ಅಗ್ರ ಮೂರು ಶ್ರೇಷ್ಠ ವಿವಿಗಳಲ್ಲಿ ಮೊದಲ ಸ್ಥಾನ ಪಡೆದಿದೆ. ಭಾರತೀಯ ನಿರ್ವಹಣಾ ಸಂಸ್ಥೆಗಳ(ಐಐಎಂ) ಪೈಕಿ ಐಐಎಂ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಕಾನೂನು ವಿಭಾಗದಲ್ಲಿ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ ಮೊದಲ ಸ್ಥಾನ ಪಡೆದಿದೆ. ದಂತ ವೈದ್ಯಕೀಯ ವಿಭಾಗದಲ್ಲಿ ಮಣಿಪಾಲ ದಂತವೈದ್ಯಕೀಯ ಕಾಲೇಜು ಎರಡನೇ ಸ್ಥಾನದಲ್ಲಿದೆ.

ಬೋಧನೆ, ಕಲಿಕೆ, ಸಂಪನ್ಮೂಲ, ಸಂಶೋಧನೆ ಮತ್ತು ವೃತ್ತಿಪರ ತರಬೇತಿ, ಪದವೀಧರರ ಪ್ರಾವೀಣ್ಯತೆ, ಪ್ರಭಾವ ಮತ್ತು ಒಳಗೊಳ್ಳುವಿಕೆ ಇತ್ಯಾದಿ ಮಾನದಂಡಗಳನ್ನು ಅನುಸರಿಸಿ ರ್‍ಯಾಂಕಿಂಗ್ ಪಟ್ಟಿ ತಯಾರಿಸಲಾಗುತ್ತದೆ. ಇಲ್ಲಿ ರ್‍ಯಾಂಕ್ ಪಡೆದ ಸಂಸ್ಥೆಗಳಿಗೆ ಜಾಗತಿಕ ಸ್ಪರ್ಧೆಗೆ ಪ್ರವೇಶಿಸಲು ಅನುಕೂಲವಾಗುತ್ತದೆ. ಶ್ರೇಷ್ಠ ವಿವಿಗಳು, ಕಾಲೇಜು, ವೈದ್ಯಕೀಯ, ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಫಾರ್ಮಸಿ ಹೀಗೆ ಹಲವು ವಿಭಾಗಗಳಲ್ಲಿ ಟಾಪ್ 10 ಸ್ಥಾನಗಳನ್ನು ಪ್ರಕಟಿಸಲಾಗಿದೆ.

ಸಮಗ್ರ ರ್‍ಯಾಂಕಿಂಗ್‌ನಲ್ಲಿ ಮದ್ರಾಸ್ ಐಐಟಿ ಮೊದಲ ಸ್ಥಾನದಲ್ಲಿದ್ದರೆ, ದಿಲ್ಲಿ ಐಐಟಿ ಮೂರನೇ ಸ್ಥಾನದಲ್ಲಿದೆ. ದೇಶದ ಮೂರು ಶ್ರೇಷ್ಠ ವಿವಿಗಳಲ್ಲಿ ಬೆಂಗಳೂರು ಐಐಎಸ್ಸಿ ಮೊದಲ ಸ್ಥಾನ ಪಡೆದಿದ್ದು, ದಿಲ್ಲಿಯ ಜವಾಹರಲಾಲ್ ನೆಹರೂ ವಿವಿ (ಜೆಎನ್‌ಯು) ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಸಿಕ್ಕಿವೆ. ಅತ್ಯುತ್ತಮ ಭಾರತೀಯ ನಿರ್ವಹಣಾ ಸಂಸ್ಥೆಗಳ(ಐಐಎಂ) ಪೈಕಿ ಐಐಎಂ ಅಹಮದಾಬಾದ್‌ಗೆ ಮೊದಲ, ಐಐಎಂ ಬೆಂಗಳೂರಿಗೆ ಎರಡನೇ ಹಾಗೂ ಐಐಎಂ ಕೋಲ್ಕತಾಗೆ ಮೂರನೇ ಸ್ಥಾನ ಲಭಿಸಿದೆ. ಐಐಎಂ ಬೆಂಗಳೂರು ಕಳೆದ ವರ್ಷ ಮೊದಲ ಸ್ಥಾನದಲ್ಲಿದ್ದರೆ, ಅಹಮದಾಬಾದ್ ಎರಡನೇ ಸ್ಥಾನದಲ್ಲಿತ್ತು. ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ಐಐಟಿ ಮದ್ರಾಸ್, ಐಐಟಿ ದಿಲ್ಲಿ ಮತ್ತು ಐಐಟಿ ಮುಂಬಯಿ ಟಾಪ್ 3 ಸ್ಥಾನ ಪಡೆದಿವೆ.

ಫಾರ್ಮಸಿ ಕ್ಷೇತ್ರದಲ್ಲಿ ದಿಲ್ಲಿಯ ಜಾಮಿಯಾ ಹಮ್‌ದರ್ದ್ ಸಂಸ್ಥೆ ಚಂಡೀಗಢದ ಪಂಜಾಬ್ ಯೂನಿವರ್ಸಿಟಿ ಹಾಗೂ ಮೊಹಾಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸುಟಿಕಲ್ ರಿಸರ್ಚ್ ಸಂಸ್ಥೆಗಳು ಮೊದಲ 3 ಸ್ಥಾನ ಪಡೆದಿವೆ. ವೈದ್ಯಕೀಯ ಕಾಲೇಜುಗಳ ವಿಭಾಗದಲ್ಲಿ ದಿಲ್ಲಿಯ ಏಮ್ಸ್, ಚಂಡೀಗಢದ ಪೋಸ್ಟ್ ಗ್ರ್ಯಾಜುಯೇಟ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಎಜುಕೇಷನ್ ಅಂಡ್ ರಿಸರ್ಚ್ ಹಾಗೂ ತಮಿಳುನಾಡಿನ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜು (ಸಿಎಂಸಿ) ಮೊದಲ ಮೂರು ಸ್ಥಾನ ಪಡೆದಿವೆ.

ಎಚ್‌ಆರ್‌ಡಿ ಸಚಿವಾಲಯ ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ಈ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸುತ್ತದೆಯಾದರೂ ಈ ಬಾರಿ ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತಡವಾಗಿ ಪಟ್ಟಿ ಬಿಡುಗಡೆ ಮಾಡಿದೆ. ದೇಶಾದ್ಯಂತ 3,771 ವಿವಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ರ್‍ಯಾಂಕಿಂಗ್ ಪ್ರಕ್ರಿಯೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಈ ರ್‍ಯಾಂಕಿಂಗ್ ವ್ಯವಸ್ಥೆಯನ್ನು 2015ರಿಂದ ಆರಂಭಿಸಲಾಗಿದೆ. ಪ್ರತಿವರ್ಷ ಎಂಜಿನಿಯರಿಂಗ್, ವೈದ್ಯಕೀಯ, ತಾಂತ್ರಿಕತೆ ಮತ್ತು ಆಡಳಿತ ನಿರ್ವಹಣೆ ವಿಭಾಗಗಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಈ ವರ್ಷ ದಂತ ವೈದ್ಯಕೀಯ ವಿಭಾಗವನ್ನೂ ಸೇರ್ಪಡೆ ಮಾಡಲಾಗಿದೆ.

ರ್‍ಯಾಂಕಿಂಗ್ ವ್ಯವಸ್ಥೆಯಿಂದ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಸ್ಪರ್ಧಾತ್ಮಕ ಪೈಪೋಟಿ ಏರ್ಪಡುತ್ತದೆ. ಇದು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಕೊಡುಗೆ ನೀಡುತ್ತದೆ.
**-ರಮೇಶ್ ಪೋಖ್ರಿಯಾಲ್**, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ



ಬೆಂಗಳೂರು ಐಐಎಸ್ಸಿ

## ಕರ್ನಾಟಕದ ಸಾಧನೆ

**ಬೆಂಗಳೂರು ಐಐಎಸ್ಸಿ**
ಸಮಗ್ರ ರ್‍ಯಾಂಕಿಂಗ್‌ನಲ್ಲಿ 2ನೇ ಸ್ಥಾನ, ಶ್ರೇಷ್ಠ ವಿವಿಗಳ ಪೈಕಿ ಮೊದಲ ಸ್ಥಾನ

**ಬೆಂಗಳೂರು ಐಐಎಂ**
ಅತ್ಯುತ್ತಮ ಐಐಎಂಗಳ ಪೈಕಿ 2ನೇ ಸ್ಥಾನ

**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು**
ಕಾನೂನು ವಿಭಾಗದಲ್ಲಿ ಮೊದಲ ಸ್ಥಾನ

**ಮಣಿಪಾಲ ದಂತ ವೈದ್ಯಕೀಯ ಕಾಲೇಜು**
ದಂತ ವೈದ್ಯಕೀಯ ವಿಭಾಗದಲ್ಲಿ 2ನೇ ಸ್ಥಾನ

# ಅರಸು ಕಾಲೇಜಿನ ೧೧ನೇ ಘಟಿಕೋತ್ಸವ

ಕೋಲಾರ, ಜೂ ೧೨

ನಗರದ ಹೊರವಲಯದ ಟಮಕದ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ೧೧ನೇ ವರ್ಚುವಲ್ ಘಟಿಕೋತ್ಸವವನ್ನು ಇಂದು ಬೆಳಿಗ್ಗೆ ೧೧ ಘಂಟೆಗೆ ಸಂಸ್ಥೆಯ ಕುಲಾಧಿಪತಿ ಡಾ॥ ಎಸ್. ಕುಮಾರ್ ಅಧ್ಯಕ್ಷತೆಯಲ್ಲಿ ಏರ್ಪಡಿಸಿದೆ.

ಮುಂಬೈನ ಎನ್‌ಎಸ್‌ಇ ಅಕಾಡೆಮಿ ಮತ್ತು ಬಟರ್‌ಫ್ಲೈ ಇನ್ನೊವೇಶನ್ಸ್‌ನ ನಿರ್ದೇಶಕ ಡಾ॥ ಕೆ.ಆರ್.ಎಸ್. ಮೂರ್ತಿ ಘಟಿಕೋತ್ಸವ ಭಾಷಣ ಮಾಡುವರು.

ಕುಲಪತಿ ಡಾ॥ ಜಿ.ಪ್ರದೀಪ್ ಕುಮಾರ್, ದೇವರಾಜ ಅರಸು ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ರಾಜೇಶ್ ಎನ್. ಜಗದಾಳೆ ಉಪಸ್ಥಿತರು.

ULLRC SDUAHER